ಬಿ.ಎಸ್. ನಾರಾಯಣಸ್ವಾಮಿ, ಬೋದನ ಹೊಸಹಳ್ಳಿ
ಊರಿಗೆ ಬಂದವಳು ನೀರಿಗೆ ಬಾರದೆ ಇರುತ್ತಾಳೆಯೇ ಎಂಬುದರ ಇಂದಿನ ರೂಪ?



ಫ್ಲಾಟಿಗೆ ಬಂದವಳು ಚ್ಯಾಟಿಗೆ ಬರದಿರುತ್ತಾಳೆಯೇ?

ಚನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ಬದುಕಿನ ತಲ್ಲಣಗಳಿಗೆ ಉತ್ತರ ಕಂಡುಕೊಳ್ಳುವುದು ಯಾವಾಗ?
ಪೂರ್ವಾಪರಗಳನ್ನು ಯೋಚಿಸಿದ ನಂತರ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ಮದುವೆಯಾದ ತಕ್ಷಣ ಹೆಂಡತಿಯನ್ನು ತೋರಿಸಿ 'ಲೈಫ್ ಪಾರ್ಟನರ್' ಎನ್ನುವುದರ ಅರ್ಥವೇನು?
ನನ್ನೊಡನೆ ಜೀವಾವಧಿ ಶಿಕ್ಷೆ ಅನುಭವಿಸಲು ಬಂದವಳು ಎಂದು.

ಶ್ರುತಿ ರಿಗ್ರೆಟ್ ಅಯ್ಯರ್, ಅಮೆರಿಕ
ಕಣ್ಣು ದೃಷ್ಟಿ ಕಡಿಮೆ ಆದರೆ ಕನ್ನಡಕ ಹಾಕ್ತಾರೆ. ನಾಲಿಗೆಯ ರುಚಿ ಕಡಿಮೆ ಆದರೆ?



ಆಂಧ್ರಭೋಜನ ಮಾಡುತ್ತಾರೆ.

ಗಂಜಾಂ ನಾಗರಾಜ್, ಮೈಸೂರು
ಇತ್ತೀಚೆಗೆ ಗುರುಗಳಿಗೇ ತಿರುಮಂತ್ರ ಹಾಕುವ ಶಿಷ್ಯಂದಿರು ಹೆಚ್ಚಾಗಿದ್ದಾರಲ್ಲಾ?
ಗುರುವು ಅಪ್ಡೇಟ್ ಆಗದೆ ಔಟ್‌ಡೇಟೆಡ್ ಆಗಿರುವುದೇ ಕಾರಣ..

ತುರಗಲ್ಲ ಉಮೇಶ, ರಾಮದುರ್ಗ
ಶಾಲೆಯ ಲೀವಿಂಗ್ ಸರ್ಟಿಫಿಕೇಟಲ್ಲಿ ಜಾತಿ ನಮೂದಿಸದಿದ್ದರೆ ಕ್ರಮೇಣ ನಮ್ಮ ದೇಶದಲ್ಲಿ ಜಾತಿ ಹೋಗಬಹುದೆ?
ಊಹೂಂ. ಜಾತಿಯೇ 'ಜಾತೀ ಹೂ ಮೈ' ಎಂದರೂ 'ಜಲ್ದೀ ಹೈ ಕ್ಯಾ' ಎಂದು ನಿಲ್ಲಿಸಿಕೊಳ್ಳುತ್ತಾರೆ.

ಮಹಾವೀರ ಕಾಸರ, ಶಿವಮೊಗ್ಗ
ಶಕ್ತಿವಂತ ಯಮನಿಗೆ ಪಾಶದ ಅವಶ್ಯಕತೆ ಇದೆಯೆ?
ಬೆರಳುಗಳಿದ್ದೂ ಸ್ಪೂನನ್ನು ಬಳಸುತ್ತೇವಲ್ಲ, ಹಾಗೆಯೇ ಅವನೂ ಕೈಯಲ್ಲಿ ಮುಟ್ಟನಂತೆ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ಮಾತುಮಾತಿಗೂ ಮೂಗು ತೂರಿಸುವುದು ಎಂದರೇನು?
ಪ್ರತಿ ಮಾತಿನ ಮಧ್ಯೆ ಮುಕೇಶನ ಹಾಡನ್ನು ಹಾಡುವುದೆಂದಿರಬಹುದು.

ಧನ್ಯತಾ ಎಂ.ಸಿ. ಬೆಂಗಳೂರು
ಮೇಲೇರಿದ್ದು ಕೆಳಗಿಳಿಯಲೇಬೇಕು ಎಂಬುದು ಬೆಲೆಯೇರಿಕೆಗೆ ಅನ್ವಯವಾಗುವುದಿಲ್ಲವೆ?
ಆಗುತ್ತದೆ – ಅಮೂಲ್ಯವಾದ ಸಂಸ್ಕಾರಗಳ ಬೆಲೆ ದಿನೇ ದಿನೇ ಇಳಿಯುತ್ತಿದೆ.

ಕಾವ್ಯಶ್ರೀ ಪತ್ರಿಮಠ, ಶೋರಾಪುರ
ಬುದ್ಧಿಜೀವಿ ಎಂದು ಹೆಸರಾದ ಮಾನವನಲ್ಲಿ ವಿಲಕ್ಷಣಗಳೇಕೆ?
ಇರುವ ಬುದ್ಧಿಯೆಲ್ಲ ಜೀವಿ (ಹೆರೆದು) ಹೋಗಿರುತ್ತದಲ್ಲ.

ಬಾ.ರಂ. ಸುರೇಶ್, ಶಿವಮೊಗ್ಗ
ಎಣ್ಣೆಯ ಗುಂಡಿಗೂ, ಕೋವಿಯ ಗುಂಡಿಗೂ ವ್ಯತ್ಯಾಸವೇನು?
ಎಣ್ಣೆಯ ಗುಂಡು ಕಂತಿನಲ್ಲಿ ಕೊಲ್ಲುತ್ತದೆ. ಕೋವಿಯದು ಒನ್ ಟೈಮ್ ಸೆಟಲ್‌ಮೆಂಟ್.

ರಾಜು ಎಸ್. ಗಾಲಿ, ಅಥಣಿ
ಸರ್ಕಾರದ ಗ್ಯಾರಂಟಿಗಳು ಜನರಿಗೋ ಅಥವಾ ಜನಪ್ರತಿನಿಧಿಗಳಿಗೋ?
ಜನಕ್ಕೆ ಗಾಳದ ಹುಳು; ಪ್ರತಿನಿಧಿಗಳಿಗೆ ಬುಟ್ಟಿ ಭರ್ತಿ ಮೀನು.

ಬಿ. ಚಂದ್ರೇಗೌಡ, ಬೆಂಗಳೂರು
ನಾಚಿ ನೀರಾಗುವುದು ಎಂದರೇನು?
ನಾಚಿಸಿದವರತ್ತ ಹರಿದು ಹೋಗುವುದು ಎಂದು.

## ಬಹುಮಾನಿತ ಪ್ರಶ್ನೆ

ಕೆ.ವಿ. ಗೋವಿಂದಾಚಾರಿ, ಮೈಸೂರು
ಸಾಫ್ಟ್‌ವೇರ್ ವೃತ್ತಿಯಲ್ಲಿರುವವರು ಹೆಚ್ಚು ಫಾಸ್ಟ್ ಫುಡ್ ತಿನ್ನುವ ಅಭ್ಯಾಸ ಇರುವುದೇಕೆ?
ಸ್ಲೋ ಫುಡ್ ತಿನ್ನಲು ಸಮಯವಿಲ್ಲವಂತೆ.

ಶೀಲಾ ಸತ್ಯೇಂದ್ರಸ್ವಾಮಿ, ಹರವೆ
ಮಂಕುಬೂದಿ ಎರಚೋದು ಅಂದರೆ ಏನು ಸಾರ್?
'ನಿಮಗೆ ಬಹುಮಾನ ಬಂದಿದೆ. ಪಡೆಯಲು ನಿಮ್ಮ ಅಕೌಂಟಿನ ಓಟಿಪಿ ಹೇಳಿ' ಎಂಬ ಕರೆ.

ಅಮರಯ್ಯಾ ಪತ್ರಿಮಠ, ಸುರಪುರ
ಜೀವನದಲ್ಲಿ ಅಚಲವಾಗಿರುವುದು ಯಾವುದು?
ಮೂಗಿನ ಕಂಬ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
ಪ್ರೀತಿಯ ಸಂಕೇತವಾಗಿ ಗುಲಾಬಿ ಹೂವನ್ನೇ ಏಕೆ ಕೊಡುತ್ತಾರೆ?



'ನಿನ್ನನ್ನೂ ಕಷ್ಟಗಳೆಂಬ ಮುಳ್ಳುಗಳ ಮಧ್ಯದಿಂದ ಹೆಕ್ಕಿ ನಳನಳಿಸುತ್ತಿರುವಂತೆ ನೋಡಿಕೊಳ್ಳುವೆ' ಎಂದು ಸೂಚಿಸಲು.

ಮೀನಾಕ್ಷಿ ರಾಮಗುಂಡಿ, ಬೈಲಹೊಂಗಲ
ಬಿಳಿ ಕೂದಲು ಯಾವುದರ ಸಂಕೇತ?
'ಗೋದ್ರೆಜ್/ಲೋರಿಯಲ್ ಕೊಳ್ಳುವ ಸಮಯ ಬಂದಿದೆ' ಎಂದು ಸೂಚಿಸುವ ಸಂಕೇತ.

ದೇವೇಂದ್ರ, ಕಡೂರು
ಅಮ್ಮ ಇರುವ ಮನೆಯಲ್ಲಿ ಹಸಿವು ಅನ್ನುವುದೇ ಇರಲ್ವಂತಲ್ಲ...?
ಅಮ್ಮನೆಂಬ ಹಣತೆಯಲ್ಲಿ ತ್ರಾಣವೆಂಬ ತೈಲವಿರುವವರೆಗೆ ಇದು ಸತ್ಯ.

ಪಿ.ಜೆ. ರಾಘವೇಂದ್ರ, ಮೈಸೂರು
ಕುಟುಂಬದಲ್ಲಿಯೇ ಹೊಂದಾಣಿಕೆಯಿಲ್ಲ, ಪಕ್ಷಪಕ್ಷಗಳ ನಡುವೆ ಮೈತ್ರಿ ಸಾಧ್ಯವೆ?
ಪರಸ್ಪರ ಕಚ್ಚಾಡುವ ನಾಯಿಗಳು ಹೆಣ್ಣುನಾಯಿಯ ಹಿಂದೆ ಹಿಂಡಾಗಿ ಹೋಗುತ್ತವಲ್ಲ.

■ ರಾಮ್